ಪತ್ರಗಳನ್ನೆಲ್ಲ ಮಹಾರಾಜರ ಮುಂದೆ ತೆರೆದಿಟ್ಟರು. ಕಾಳೀ ಮಾಮನ ಸಹಕಾರದೊಂದಿಗೆ ಮಹಾರಾಜ್ ಆ ದಾಖಲೆಗಳ ನ್ನೆಲ್ಲ ಪರಿಶೀಲಿಸತೊಡಗಿದರು. ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ, ಜಮೀನಿನೊಂದಿಗೆ ಅದರ ದಾಖಲೆಗಳನ್ನೂ ಪಾಲು ಮಾಡಲಾಗುವುದು ಎಂಬುದು ನಿಶ್ಚಿತವಾಯಿತು. ಅಷ್ಟರಲ್ಲಿ ಯೋಗಿನ್–ಮಾ ಬಂದು ಹೇಳಿದರು: ''ಶರತ್, ಬಾ. ಶ್ರೀಮಾತೆ ಯವರು ನಿನ್ನನ್ನು ಕರೆಯುತ್ತಿದ್ದಾರೆ.'' ಶ್ರೀಮಾತೆಯವರ ಹೆಸರನ್ನು ಕೇಳಿದ ಕೂಡಲೇ ಶರತ್ ಮಹಾರಾಜರು ಎದ್ದುನಿಂತು ದೊಡ್ಡ ಮಾವನಿಗೆ ಹೇಳಿದರು, ''ದೊಡ್ಡ ಮಾವ, ದಾಖಲೆಗಳಿಗೆ ಕೈಹಾಕಬೇಡಿ. ಅದು ಹೇಗಿದೆಯೋ, ಹಾಗೇ ಇರಲಿ. ನಾನು ಬಂದ ಮೇಲೆ ನೋಡುತ್ತೇನೆ.'' ಆದರೆ ಹಾಗೆ ಹೇಳುವಾಗ ಅವರ ದೃಷ್ಟಿ ನನ್ನ ಮೇಲಿತ್ತು. ಅವರ ಮಾತಿನ ಅರ್ಥವೇನು ಎಂದು ನನಗೆ ತಿಳಿಯಿತು. ದೊಡ್ಡ ಮಾವ ದಾಖಲೆಪತ್ರಗಳ ಮೇಲೆ ಕೈಹಾಕಿದರೆ, ಆಗ ಏನು ಆದೀತೋ ಎಂಬ ಆಲೋಚನೆ ಬಂದು ನನಗೆ ಗೊಂದಲವುಂಟಾಯಿತು. ಮಹಾರಾಜ್ ಅತ್ತ ಹೊರಟುಹೋದರು. ಜೊತೆಗೇ ದೊಡ್ಡ ಮಾವ ಕಾಳೀಮಾವ ನೊಂದಿಗೆ ಮಾತಿಗೆ ಮಾತು ಬೆಳೆಸಿ ಜಗಳ ಆರಂಭಿಸಿಬಿಟ್ಟರು. ಕೊನೆಗೆ ದೊಡ್ಡ ಮಾವ 'ದಾಖಲೆ ಪತ್ರ ಕೊಡಲಾರೆ' ಎನ್ನುತ್ತ ಅರೆಕ್ಷಣದಲ್ಲೇ ಎಲ್ಲ ದಾಖಲೆಪತ್ರಗಳನ್ನೂ ಕೈಯಲ್ಲಿ ತೆಗೆದು ಕೊಂಡುಬಿಟ್ಟರು. ಹಿಂದಿರುಗಿ ನೋಡಿದರೆ, ಹೊರಗೆ ಹೋಗಲು ದಾರಿಯಿಲ್ಲ. ''ಮಗೂ, ದಾರಿ ಬಿಡು. ನಾನು ಹೋಗುತ್ತೇನೆ'' ಎಂದರು ದೊಡ್ಡ ಮಾವ – ಕಾತರದ ಧ್ವನಿಯಿಂದ. ಇಬ್ಬರು ಅಣ್ಣ ತಮ್ಮಂದಿರೂ ದಾಖಲೆಗಳನ್ನು ಹಿಡಿದು ಎಳೆದಾಡತೊಡಗಿದರು. ಈ ಗದ್ದಲವನ್ನು ಕೇಳಿ ಶರತ್ ಮಹಾರಾಜ್ ಓಡಿಬಂದರು. ಬಂದವರೇ ನನ್ನತ್ತ ನೋಡಿ ಏರುಧ್ವನಿಯಿಂದ, ''ಏನು ನಿಂತು ನೋಡುತ್ತಿದ್ದೀಯಾ?'' ಎಂದು ಅಬ್ಬರಿಸಿಬಿಟ್ಟರು. ಅವರ ಜೋರಾದ ಧ್ವನಿಯನ್ನು ಕೇಳಿ ದೊಡ್ಡ ಮಾವ ಕುಳಿತುಬಿಟ್ಟರು. ಕಾಳೀಮಾವ ಕೂಡ ತಮ್ಮ ಜಾಗದಲ್ಲಿ ಕುಳಿತುಕೊಂಡರು. ದೊಡ್ಡ ಮಾವ ತಮ್ಮ ಬಳಿಯಿದ್ದ ದಾಖಲೆಪತ್ರಗಳನ್ನು ಮಹಾರಾಜರ ಮುಂದೆ ಇಟ್ಟರು.

ಇಂಥ ಕೆಲಸಗಳನ್ನೆಲ್ಲ ಈ ರೀತಿ ಗದ್ದಲವಿಲ್ಲದೆ ಮಾಡಲಾಗು ತ್ತಿರಲಿಲ್ಲ. ಊರ ಜನರು ಅಲ್ಲಿ ಹಾಜರಿರುತ್ತಿದ್ದರು. ಆದರೆ ಮಾವಂದಿರ ಈ ಎಲ್ಲ ವಿರೋಧಗಳ ನಡುವೆಯೂ ನಾನು ಗಮ ನಿಸಿದ್ದೆ – ಶ್ರೀಮಾತೆಯವರು ಸ್ಥಿರವಾಗಿ, ಶಾಂತವಾಗಿ ಇರು ತ್ತಿದ್ದರು. ಅದೇ ರೀತಿ ಶರತ್ ಮಹಾರಾಜ್ ಕೂಡ ಇರುತ್ತಿದ್ದರು.

ಈ ನಡುವೆ ಒಂದು ದಿನ ಶರತ್ ಮಹಾರಾಜ್ ಹೇಳಿದರು: ''ನಮ್ಮಲ್ಲಿ ಕೆಲವರು ಮೂವತ್ತು ವರ್ಷ ವಯಸ್ಸಿನ ಸಾಧುಗಳನ್ನು ನೋಡುತ್ತೀಯಾ. ಕೆಲವರು ಇಪ್ಪತ್ತೈದು ವರ್ಷದವರು. ತಾಂಬೂಲ ದಿಂದ ಹಿಡಿದು ಸುಣ್ಣದವರೆಗೆ ತಮಗೆ ಏನು ಸಿಗದೆ ಹೋದರೂ ಬೆಂಕಿ ಹತ್ತಿಕೊಳ್ಳುವುದು. ಆದರೆ ಶ್ರೀಮಾತೆಯವರು ಏನು ಮಾಡು ತ್ತಿದ್ದಾರೆ ನೋಡಿದೆಯಾ? ಅವರ ತಮ್ಮಂದಿರೇ ಎಂಥೆಂಥ ಅನಾ ಹುತ ಮಾಡುತ್ತಿದ್ದಾರೆ! ಆದರೆ ಶ್ರೀಮಾತೆ ಹೇಗಿದ್ದಾರೋ ಹಾಗೆಯೇ ಇದ್ದಾರೆ – ಸ್ಥಿರವಾಗಿ, ಶಾಂತವಾಗಿ!'' ಅತ್ಯಂತ ನಿಜ ವಾದ ಮಾತು. ಪ್ರತಿದಿನವೂ ಒಂದಲ್ಲ ಒಂದು ಗದ್ದಲವುಂಟಾಗು ತ್ತಿತ್ತು. ಶ್ರೀಮಾತೆಯವರು ಆ ಮನೆಯಲ್ಲಿ ಇಲ್ಲವೇ ಇಲ್ಲ ವೆಂಬಂತೆ ಇರುತ್ತಿದ್ದರು.

ಮಾನವನಿಗೆ ತನ್ನ ಮನಸ್ಸಿನಲ್ಲಿ ಆದರ್ಶ ಲಭಿಸಿತೆಂದರೆ, ತನ ಗರಿವಿಲ್ಲದೆಯೇ ಇತರರೊಂದಿಗೆ ಆ ಆದರ್ಶಗಳನ್ನು ಹೋಲಿಸಿ ಕೊಂಡು, ಅದರ ಮೌಲ್ಯಮಾಪನ ಮಾಡುತ್ತಾರೆ. ನಮ್ಮ ಆದರ್ಶ ವೆಂದರೆ ಶ್ರೀರಾಮಕೃಷ್ಣರು ಹಾಗೂ ಶ್ರೀಮಾತೆಯವರು. ನನಗೆ ಶ್ರೀರಾಮಕೃಷ್ಣರನ್ನು ನೋಡುವ ಸೌಭಾಗ್ಯ ಒದಗಿಬರಲಿಲ್ಲ. ಆದರೆ ನನ್ನ ಕೆಲಸಗಳ ನಡುವೆ ಶ್ರೀಮಾತೆಯವರನ್ನು ನೋಡುವ ಸೌಭಾಗ್ಯ ನನಗುಂಟಾಯಿತು. ಇದರಿಂದಾಗಿ ನನಗನ್ನಿಸುತ್ತಿತ್ತು, ಶರತ್ ಮಹಾರಾಜರಲ್ಲಿ ಕಂಡುಬರುತ್ತಿದ್ದ ಧೈರ್ಯ, ಸಹಾನು ಭೂತಿ, ಅನುಕಂಪೆ ಇವೆಲ್ಲ ಶ್ರೀಮಾತೆಯವರ ಆಶೀರ್ವಾದ ದಿಂದಲೇ ಲಭಿಸಿತು ಎಂದು.

ಮಾವಂದಿರ ಆಸ್ತಿ ವಿಭಾಗದ ಮಧ್ಯವರ್ತಿಯಾಗಿದ್ದವರು– ಸ್ವಾಮಿ ಶಾರದಾನಂದರು, ಶಾರದಾಪ್ರಸಾದ್ ಚಟ್ಟೋಪಾಧ್ಯಾಯ (ತಾಜ್‌ಪುರ್‌ನವರು) ಹಾಗೂ ಶಂಭುನಾಥ ರಾಯ್ (ಜಿಬಟಾ ಗ್ರಾಮದವರು). ತಕ್ಕ ಸಮಯದಲ್ಲಿ ಮಧ್ಯವರ್ತಿಗಳು ಮಾಡಿದ ವಿಭಾಗವನ್ನು ದಾಖಲಿಸಲಾಯಿತು. ತಾಜ್‌ಪುರ್‌ನ ಶಾರದಾ ಪ್ರಸದ್ ಬಾಬುಗಳು ಮಾವಂದಿರ ವಿಚಾರವಾಗಿ ಶ್ರೀಮಾತೆ ಯವರನ್ನು ವಿಚಾರಿಸಲು ಜನರನ್ನು ಕಳುಹಿಸಿ ಕೇಳಿದರು – ಅವರು ಯಾರ ಕೋಣೆಯಲ್ಲಿ ವಾಸ ಮಾಡಲು ಬಯಸುತ್ತಾರೆ ಎಂಬುದಾಗಿ. ಶ್ರೀಮಾತೆಯವರು ಉತ್ತರವನ್ನು ಹೇಳಿ ಕಳುಹಿಸಿ ದರು, ''ಶ್ರೀರಾಮಕೃಷ್ಣರು ಹೇಳುತ್ತಿದ್ದರು, ಇಲಿಗಳು ಬಿಲ ಕೊರೆಯುತ್ತವೆ – ಹಾವುಗಳು ಆ ಬಿಲಗಳಲ್ಲೇ ಇರುತ್ತವೆ ಎಂಬು ದಾಗಿ.'' ಶಾರದಾಪ್ರಸಾದ ಬಾಬು ಅದನ್ನು ಕೇಳಿ, ಮತ್ತೊಮ್ಮೆ ಮಾವಂದಿರ ಸಂಬಂಧವಾಗಿ ಶ್ರೀಮಾತೆಯವರನ್ನು ಕೇಳಲು ಜನ ರನ್ನು ಕಳುಹಿಸಿಕೊಟ್ಟರು: ಪ್ರಸನ್ನ, ಕಾಳಿ ಮುಂತಾದವರ ಮನೆ, ಕೋಣೆ, ಜಮೀನು ಇತ್ಯಾದಿಗಳನ್ನು ಪಾಲು ಮಾಡಲಾಗುತ್ತಿದೆ. ಶ್ರೀಮಾತೆಯವರು ಈಗ ಯಾವ ಕೋಣೆಯಲ್ಲಿ ಉಳಿದುಕೊಳ್ಳು ತ್ತಾರೆ ಎಂಬುದನ್ನು ಖಚಿತವಾಗಿ ತಿಳಿಸದಿದ್ದರೆ ಅವರು ಜಯ ರಾಮಬಾಟಿಯಲ್ಲಿ ಹೇಗೆ ಇರುತ್ತಾರೆ? – ಎಂಬುದಾಗಿ. ಅದಕ್ಕೆ ಶ್ರೀಮಾತೆಯವರು ಹೇಳಿ ಕಳುಹಿಸಿದರು: ''ಎರಡು ದಿನ ಪ್ರಸ ನ್ನನ ಕೋಣೆಯಲ್ಲಿ, ಎರಡು ದಿನ ಕಾಳಿಯ ಕೋಣೆಯಲ್ಲಿ ಇರು ತ್ತೇನೆ.'' ಶಾರದಾ ಪ್ರಸಾದ ಬಾಬು ಮತ್ತೆ ಏನನ್ನೂ ಪ್ರಶ್ನಿಸಲಿಲ್ಲ. ಶ್ರೀಮಾತೆಯವರು ಯಾವ ಕೋಣೆಯಲ್ಲಿ ಇರುತ್ತಿದ್ದರೋ, ಅದನ್ನು ಪ್ರಸನ್ನ ಮಾವನ ಪಾಲಿನಲ್ಲಿ ಸೇರಿಸಿಬಿಟ್ಟರು.